**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 9/2020**

**ಚಾ.ಸಾ. : 09**

**ಫ್ರಾ.ಸಾ. : 07**

| | |
|---|---|
| ಸಾಕ್ಷಿಯ ಹೆಸರು | : ವಾಸು |
| ತಂದೆಯ ಹೆಸರು | : ನಾರಾಯಣ ದೇವಾಡಿಗ |
| ವಯಸ್ಸು | : 56 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ | : ಕೋಕ್ತಿ, ಬೆಂಗ್ರೆ-II, ಭಟ್ಕಳ ತಾಲೂಕು |

**ದಿನಾಂಕಃ 26-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದ**

1. ಫ್ರಾಸಾ 1 ನನ್ನ ಹೆಂಡತಿ, ಫ್ರಾಸಾ 5 ನನ್ನ ಮಗ, ಫ್ರಾಸಾ 4 ನನ್ನ ಬಾವ, ಫ್ರಾಸಾ 6 ನನ್ನ ಹೆಂಡತಿಯ ಚಿಕ್ಕಪ್ಪನ ಮಗ, ಚಾಸಾ 11 ನನ ಮಾವ ಹಾಗೂ ಚಾಸಾ 12 ನನ್ನ ಹೆಂಡತಿಯ ಸಂಬಂಧಿಕರಾಗಿರುತ್ತಾರೆ. ಮೃತೆ ಭಾರತಿ ನನ್ನ ಮಗಳಾಗಿದ್ದು ದಿಃ 25.07.2016 ರಂದು ಆರೋಪಿತನೊಂದಿಗೆ ಭಟ್ಕಳದಲ್ಲಿ ರಿಜಿಸ್ಟರ್ ಮದುವೆಯಾಗಿದ್ದು ಮದುವೆಗೆ ನಾವು ಹೋಗಿದ್ದೆವು. ನಂತರ ಆರೋಪಿತನ ಮನೆಯ ಜನರು ಅವರನ್ನು ಮನೆಯ ಒಳಗೆ ಸೇರಿಸಿಕೊಳ್ಳದೇ ಇದ್ದದ್ದರಿಂದ ಮೃತೆ ಹಾಗೂ ಆರೋಪಿತನು ಹೊನ್ನಾವರ ಹಾಗೂ ಸಾಗರದ ಕಡೆಗೆ ಹೋಗಿ ಉಳಿದುಕೊಂಡಿದ್ದರು. ಆರೋಪಿತನು ಕೂಲಿ ಕೆಲಸ ಮಾಡಿಕೊಂಡಿದ್ದು ಅವರು ಒಳ್ಳೆಯ ರೀತಿಯಲ್ಲಿ ಸಂಸಾರ ಮಾಡಿಕೊಂಡು ಇದ್ದರು. ಆರೋಪಿತನು ನನ್ನ ಮಗಳ ಮೇಲೆ ಯಾವತ್ತೂ ಸಂಶಯ ಪಟ್ಟಿದ್ದು ಇರುವುದಿಲ್ಲ ಹಾಗೂ ಆಕೆಗೆ ಮಾನಸಿಕವಾಗಿ ತೊಂದರೆಯನ್ನು ಕೊಡುತ್ತಿರಲಿಲ್ಲ. ಮೃತೆ ಆತ್ಮಹತ್ಯೆ ಮಾಡಿಕೊಳ್ಳಲು ಆರೋಪಿ ಯಾವದೇ ದುಷ್ಪ್ರೇರಣೆಯನ್ನು ನೀಡಿರುವುದಿಲ್ಲ.

2. ನನ್ನ ಮಗಳು ದಿಃ 15.12.2016 ರಂದು ಮಾವಿನಕಟ್ಟೆ ಹತ್ತಿರ ರೈಲ್ವೆ ಟ್ರಾಕ್ ನಲ್ಲಿ ರೈಲು ಬಡಿದು ಮೃತಪಟ್ಟಿರುತ್ತಾಳೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಚಾಸಾ 18 ರವರ

ಸಮಕ್ಷಮ ಹೇಳಿಕೆಯನ್ನಾಗಲಿ, ತನಿಖಾಧಿಕಾರಿಯ ಸಮಕ್ಷಮ ನನ್ನ ಮರುಹೇಳಿಕೆಯನ್ನಾಗಲಿ ನೀಡಿದ್ದು ಇರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ನನ್ನ ಸಮಕ್ಷಮ ಯಾವದೇ ಪಂಚನಾಮೆಯನ್ನಾಗಲಿ, ಕಚ್ಚಾ ನಕಾಶೆಯನ್ನಾಗಲಿ ತಯಾರಿಸಿದ್ದು ಇರುವುದಿಲ್ಲ. ಈಗ ನನಗೆ ತೋರಿಸಿದ ನಿಪಿ. 3 ಪಂಚನಾಮೆ ಹಾಗೂ ನಿಪಿ 4 ಕಚ್ಚಾ ನಕಾಶೆಯ ಮೇಲೆ ನನ್ನ ಸಹಿಗಳು ಇರುತ್ತದೆ. ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಗಳನ್ನು ನಿಪಿ. 3 (ಸಿ) ಹಾಗೂ ನಿಪಿ. 4(ಸಿ) ಎಂದು ಗುರುತಿಸಲಾಯಿತು. ನಿಪಿ. 3 ರ ವಿವರಗಳು ನನಗೆ ಗೊತ್ತಿಲ್ಲ. ಈಗ ನನಗೆ ಕಾಣಿಸುತ್ತಿರುವ ನಿಪಿ 5 ಮತ್ತು 6 ಛಾಯಾಚಿತ್ರಗಳಲ್ಲಿ ನಾನು ಇದ್ದೇನೆ. ಅವುಗಳನ್ನು ಯಾವ ಕಾರಣಕ್ಕಾಗಿ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಮು ಮಾ 1 ಮತ್ತು 2 ನ್ನು ನಾನು ಈ ಹಿಂದೆ ನೋಡಿರುವುದಿಲ್ಲ.

3. ನನ್ನ ಮಗಳ ಶವದ ಮೇಲಿರುವ ಸ್ವತ್ತುಗಳನ್ನು ನನ್ನ ತಾಬಾಕ್ಕೆ ಭಟ್ಕಳದ ಸರ್ಕಾರಿ ಆಸ್ಪತ್ರೆಯಲ್ಲಿ ಪೊಲೀಸರು ನೀಡಿದ್ದು ನಾನು ಅದಕ್ಕೆ ಸ್ವೀಕೃತಿ ಪತ್ರ ನೀಡಿರುತ್ತೇನೆ ಹಾಗೂ ಆಕೆಯ ಶವ ಸ್ವೀಕರಿಸಿದ ಬಗ್ಗೆ ಸಹಾ ನಾನು ಶವ ಸ್ವೀಕೃತಿ ಪತ್ರವನ್ನು ಸಹಾ ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಸ್ವೀಕೃತಿ ಪತ್ರ ಹಾಗೂ ಶವ ಸ್ವೀಕೃತಿ ಪತ್ರವನ್ನು ಕ್ರಮವಾಗಿ ನಿಪಿ. 13 ಮತ್ತು ನಿಪಿ. 14 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ. 13 ಎ ಮತ್ತು ನಿಪಿ. 14 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಸರಕಾರಿ ಅಭಿಯೋಜಕರು ಅನುಮತಿಯನ್ನು ಕೇಳಿದ್ದು ಈ ಮೇಲಿನ ಪ್ರತಿಕೂಲ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದ**

4. ನಂತರದ ದಿನಗಳಲ್ಲಿ ಆರೋಪಿತನು ಮೃತೆಯ ಶೀಲದ ಮೇಲೆ ಸಂಶಯ ಪಡುತ್ತ ಅವಳಿಗೆ ಇಲ್ಲಸಲ್ಲದ ಆಪಾದನೆ ಮಾಡುತ್ತಾ ಮಾನಸಿಕ ತೊಂದರೆ ಕೊಡುತ್ತಿದ್ದನು ಮತ್ತು ಈ ಬಗ್ಗೆ ಮೃತೆಯು ನಮ್ಮಲ್ಲಿ ಹಲವು ಸಾರಿ ಹೇಳಿಕೊಂಡಿದ್ದಳು ಎಂದರೆ ಸರಿಯಲ್ಲ. ನಾವು ಮನೆಜನರೆಲ್ಲರೂ ಹೊಸದಾಗಿ ಮೃತೆ ಮದುವೆಯಾಗಿದ್ದು ಮುಂದೆ ಸರಿ ಹೋಗಬಹುದು ಅಂತ

ತಿಳಿದು ಮೃತೆಗೆ ಬುದ್ದಿವಾದ ಹೇಳಿದ್ದೆವು ಎಂದರೆ ಸರಿಯಲ್ಲ. ನಂತರ ಆಕೆ ಮೃತಪಡುವ 20 ದಿನಗಳ ಹಿಂದೆ ಅವಳು ನಮ್ಮ ಮನೆಗೆ ವಾಪಾಸು ಬಂದು ನಮ್ಮ ಮನೆಯಲ್ಲಿಯೇ ವಾಸವಿದ್ದಳು ಎಂದರೆ ಸರಿಯಲ್ಲ. ಆರೋಪಿ ಆಗಾಗ ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿದ್ದನು ಎಂದರೆ ಸರಿಯಲ್ಲ.

5. ಆರೋಪಿ ಮೃತೆ ಮೃತಪಡುವ 7 ದಿನಗಳ ಹಿಂದೆ ನಮ್ಮ ಮನೆಗೆ ಬಂದವನು ಮೃತೆಯನ್ನು ಉದ್ದೇಶಿಸಿ ನೀನು ಎಲ್ಲೆಲ್ಲೋ ಯಾರಾರ ಜೊತೆಗೆ ತಿರುಗಾಡಲು ಹೋಗುತ್ತೀಯಾ ಅಂತ ಅವಳ ಶೀಲದ ಮೇಲೆ ಸಂಶಯ ಪಡುತ್ತ, ನೀನು ಶೀಲಗೆಟ್ಟು ಬದುಕುವುದಕ್ಕಿಂತ ಎಲ್ಲಾದರು ಹೋಗಿ ಸಾಯಿ ಅಂತ ಹೇಳಿ ಸೂಳೆ, ರಂಡೆ ಅಂತ ಅವಾಚ್ಯ ಶಬ್ದಗಳಿಂದ ಬೈದು ಅವಳ ಕೈಯನ್ನು ಹಿಡಿದು ಎಳೆದಾಡಿದ್ದನು, ಆಗ ನನ್ನ ಹೆಂಡತಿ ಫ್ರಾಸಾ 1 ಮಧ್ಯ ಪ್ರವೇಶಿಸಿ ಮದುವೆಯಾಗಿ ಮೃತೆಯ ಮೇಲೆ ಈ ರೀತಿ ಸಂಶಯ ಪಡುವುದು ಸರಿ ಅಲ್ಲ ಅಂತ ಹೇಳಿದಾಗ ಆರೋಪಿ ಮನೆಯಿಂದ ಹೋಗಿದ್ದನು ಎಂದರೆ ಸರಿಯಲ್ಲ.

6. ದಿಃ 15.12.2016 ರಂದು ಸಂಜೆ 5.30 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ಆರೋಪಿತನು ನಮ್ಮ ಮನೆಯ ಮೊಬೈಲ್ ನಂಬರ್ 7022820412 ನೇದಕ್ಕೆ ಕರೆ ಮಾಡಿ ನನ್ನ ಮಗಳ ಹತ್ತಿರ ನೀನು ಎಲ್ಲೆಲ್ಲಿ ತಿರುಗಾಡುತ್ತೀಯಾ ಅಂತಾ ಬೈದಿದ್ದು ಆಗ ಮೃತೆ ಮೊಬೈಲನ್ನು ನನ್ನ ಹೆಂಡತಿ ಫ್ರಾಸಾ 1ರವರ ಹತ್ತಿರ ಕೊಟ್ಟಾಗ ಫ್ರಾಸಾ 1ರವರು ಆರೋಪಿತನಿಗೆ ಮೃತೆಯು ಎಲ್ಲಿಯೂ ಹೋಗಿಲ್ಲ, ಮನೆಯಲ್ಲಿಯೇ ಇದ್ದಾಳೆ ಎಂದು ಹೇಳಿದಳು ಎಂದರೆ ಸರಿಯಲ್ಲ. ನಂತರ ಮೃತೆ ಮತ್ತು ಆರೋಪಿತನು ಫೋನಿನಲ್ಲಿ ಜೋರು ಜೋರಾಗಿ ಮಾತನಾಡಿಕೊಂಡಿದ್ದರು ಮತ್ತು ನಂತರ ಮೃತೆ ಅಳುತ್ತಾ ಬೇಜಾರಿನಲ್ಲಿದ್ದಳು ಎಂದರೆ ಸರಿಯಲ್ಲ. ಸಂಜೆ 6.45 ಗಂಟೆಗೆ ಮೃತೆಯು ನಮ್ಮ ಮನೆಯ ಹತ್ತಿರದಲ್ಲಿರುವ ಅಜ್ಜನ ಮನೆಗೆ ತಾನು ಹೋಗಿ ಬರುವುದಾಗಿ ಫ್ರಾಸಾ 1ರವರ ಬಳಿ ಹೇಳಿ ಹೋಗಿದ್ದಳು ಎಂದರೆ ಸರಿಯಲ್ಲ. ಸ್ವಲ್ಪ ಸಮಯದ ನಂತರ ನನ್ನ ಮಾವ ಚಾಸಾ 11 ರವರು ನಮ್ಮ ಮನೆಯ ಹತ್ತಿರ ಬಂದಿದ್ದು ನನ್ನ ಹೆಂಡತಿ ಫ್ರಾಸಾ 1 ಅವರಿಗೆ ಮೃತೆಯು ನಿಮ್ಮ ಮನೆಯ ಹತ್ತಿರ ಹೋಗಿದ್ದಾಳೆ ಎಂದು ಹೇಳಿದಾಗ ಅವರು ನಾನು ಮನೆಯ ಹತ್ತಿರ ಹೋಗಿ ನೋಡುತ್ತೇನೆ ಎಂದು ಹೇಳಿ ಹೋಗಿದ್ದರು ಎಂದರೆ ಸರಿಯಲ್ಲ. ನಂತರ ನನ್ನ ಮಾವ ಚಾಸಾ 11 ರವರ ಮೊಬೈಲ್ ಸಂಖ್ಯೆ

9945351875 ನೇದಕ್ಕೆ ಮೊಬೈಲ್ ಸಿಮ್ ಸಂಖ್ಯೆ 8296562427 ರಿಂದ ಸಂಜೆ 7.30 ಕ್ಕೆ ಕರೆ ಬಂದಿದ್ದು ಮೃತೆ ಮಾತನಾಡಿ ತಾನು ರೈಲು ಬಡಿದು ಬಿದ್ದ ಬಗ್ಗೆ ತಿಳಿಸಿದ್ದಳು ಎಂದರೆ ಸರಿಯಲ್ಲ. ಕೂಡಲೇ ನಾನು, ನನ್ನ ಹೆಂಡತಿ ಫ್ರಾಸಾ 1 ಹಾಗೂ ಚಾಸಾ 11 ಮತ್ತು ಚಾಸಾ 12 ಸೇರಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿರುವ ರೈಲ್ವೆ ಹಳಿಯ ಹತ್ತಿರ ಹೋದಾಗ ನನ್ನ ಮಗಳಿಗೆ ಅಲ್ಲಿ ಸೇರಿದ್ದ ಜನರು ನೀರು ನೀಡಿ ಉಪಚರಿಸುತ್ತಿದ್ದರು ಮತ್ತು ನಾವು ಹೋಗಿ ನೋಡಿದಾಗ ಅವಳ ಹಣೆಗೆ, ಬಲಕೈಗೆ ಗಾಯವಾಗಿದ್ದು ಕಂಡುಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮಗೆ ಬೇರೆಯವರು ದೂರವಾಣಿ ಕರೆ ಮಾಡಿ ಮೃತೆಗೆ ರೈಲು ತಾಗಿ ಗಾಯಗಳಾಗಿದ್ದ ಬಗ್ಗೆ ತಿಳಿಸಿದ್ದರು ಎನ್ನುತ್ತಾರೆ.

7. ನಂತರ ನಾನು, ನನ್ನ ಹೆಂಡತಿ ಫ್ರಾಸಾ 1, ಚಾಸಾ 11 ಮತ್ತು ಚಾಸಾ 12 ಹಾಗೂ ನಮ್ಮ ಊರಿನವರಾದ ಚಂದ್ರು ಎನ್ನುವವರು ಸೇರಿ ನನ್ನ ಮಗಳಿಗೆ ಒಂದು ರಿಕ್ಷಾದಲ್ಲಿ ಹಾಕಿಕೊಂಡು ಮುರುಡೇಶ್ವರದ ಆರ್ ಎನ್ ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿ ಅಲ್ಲಿಯ ವೈದ್ಯರು ಮೃತೆಗೆ ಉಪಚರಿಸಿ ನಂತರ ಹೆಚ್ಚಿನ ಚಿಕಿತ್ಸೆಗೆ ಭಟ್ಕಳದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದರಿಂದ ತುರ್ತು ಚಿಕಿತ್ಸಾ ವಾಹನದಲ್ಲಿ ಮೃತೆಯನ್ನು ಭಟ್ಕಳಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗ ಮಧ್ಯೆ ಬೆಂಗ್ರೆ ತಲುಪುತ್ತಿದ್ದಂತೆ ಮೃತೆ ರಾತ್ರಿ 8.45 ಕ್ಕೆ ಮೃತಪಟ್ಟಿದ್ದು ಅವಳ ಶವವನ್ನು ಭಟ್ಕಳ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಇಟ್ಟಿದ್ದು ಇರುತ್ತದೆ ಎಂದರೆ ಸರಿ.

8. ಮೃತೆಯ ಮೇಲೆ ಆರೋಪಿತನು ಅವಳ ಶೀಲದ ಬಗ್ಗೆ ವಿನಾಕಾರಣ ಸಂಶಯ ಪಡುತ್ತಾ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಮಾನಸಿಕ ಕಿರುಕುಳ ನೀಡುತ್ತಾ ಇದ್ದವನು ದಿಃ 15.12.2016 ರಂದು ಸಂಜೆ 5.30 ಗಂಟೆಯ ಸುಮಾರಿಗೆ ಫೋನ್ ಮಾಡಿ ಮತ್ತೆ ಎಲ್ಲೆಲ್ಲೋ ಯಾರ್ಯಾರ ಜೊತೆಗೆ ತಿರುಗಾಡಲು ಹೋಗುತ್ತೀಯಾ ಅಂತಾ ಹೇಳಿ ಅವಳ ಶೀಲದ ಬಗ್ಗೆ ಸಂಶಯಪಡುತ್ತಾ ಇಲ್ಲಸಲ್ಲದ ಮಾತುಗಳಿಂದ ಮಾತನಾಡಿದ್ದರಿಂದ ಮೃತೆಯು ಮಾನಸಿಕವಾಗಿ ನೊಂದು ಯಾವದೋ ರೈಲಿಗೆ ಮೈಯೊಡ್ಡಿ ಆತ್ಮಹತ್ಯೆ ಮಾಡಿಕೊಂಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಮೃತೆಯು ಆರೋಪಿತನು ಆಕೆಯ ಶೀಲದ ಬಗ್ಗೆ ಶಂಕಿಸಿ ನೀನು ಶೀಲಗೆಟ್ಟು ಬದುಕುವುದಕ್ಕಿಂತ ಎಲ್ಲಾದರೂ ಹೋಗಿ ಸಾಯಿ ಎಂದು ಹೇಳಿದ್ದರಿಂದಲೇ ಅವಳು

ಮಾನಸಿಕವಾಗಿ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಮತ್ತು ಈ ಬಗ್ಗೆ ನನ್ನ ಹೆಂಡತಿ ಪ್ರಾಸ್ತಾ 1 ಮುರುಡೇಶ್ವರ ಪೊಲೀಸ್ ಠಾಣೆಯಲ್ಲಿ ಪಿರ್ಯಾದನ್ನು ನೀಡಿದ್ದಳು ಎಂದರೆ ಸರಿಯಲ್ಲ.

9. ನಾನು ದಿಃ 16.12.2016 ರಂದು ರಂದು ಚಾಸಾ 18 ರವರ ಸಮಕ್ಷಮ ಈಗ ನನಗೆ ಓದಿ ಹೇಳಿದಂತೆ ಅಂದರೆ " ನಂತರದ ದಿನಗಳಲ್ಲಿ ----------ರೈಲು ಬಡಿದು ಬಿದ್ದ ಬಗ್ಗೆ ತಿಳಿಸಿದ್ದು " ಮತ್ತು "ನನ್ನ ಮಗಳಾದ ------ಪಿರ್ಯಾದು ನೀಡಿದ್ದು ಇರುತ್ತದೆ" ಎಂದು ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನಿರಾಕರಿಸಿದ ಸಾಕ್ಷಿಯ ಹೇಳಿಕೆಯ ಸದ್ರಿ ನಿರ್ದಿಷ್ಟ ಭಾಗಗಳನ್ನು ಒಟ್ಟಾಗಿ ನಿಪಿ 15 ಎಂದು ಗುರುತಿಸಲಾಯಿತು.

10. ನಾನು ದಿಃ 17.12.2016 ರಂದು ರಂದು ತನಿಖಾಧಿಕಾರಿಯವರ ಸಮಕ್ಷಮ ಈಗ ನನಗೆ ಓದಿ ಹೇಳಿದಂತೆ ಅಂದರೆ " ನಂತರದ ದಿನಗಳಲ್ಲಿ ----------ರೈಲು ಬಡಿದು ಬಿದ್ದ ಬಗ್ಗೆ ತಿಳಿಸಿದ್ದು " ಮತ್ತು "ನನ್ನ ಮಗಳಾದ ------ಪಿರ್ಯಾದು ನೀಡಿದ್ದು ಇರುತ್ತದೆ" ಎಂದು ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನಿರಾಕರಿಸಿದ ಸಾಕ್ಷಿಯ ಹೇಳಿಕೆಯ ಸದ್ರಿ ನಿರ್ದಿಷ್ಟ ಭಾಗಗಳನ್ನು ಒಟ್ಟಾಗಿ ನಿಪಿ 16 ಎಂದು ಗುರುತಿಸಲಾಯಿತು.

11. ದಿಃ 17.12.2016 ರಂದು ಈ ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ 23 ರವರು ರೈಲ್ವೆ ಹಳಿಯ ಹತ್ತಿರ ಬಂದಾಗ ನಾನುನ ಅವರಿಗೆ ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಅವರು ಪಂಚರಾದ ಪ್ರಾಸಾ 2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳವನ್ನು ಪರಿಶೀಲಿಸಿ ನಿಪಿ 3 ರಂತೆ ಬೆಳಗಿನ 11 ಗಂಟೆಯಿಂದ 12 ಗಂಟೆಯವರೆಗೆ ಪಂಚನಾಮೆ ಮಾಡಿದರು ಮತ್ತು ಆ ಕಾಲಕ್ಕೆ ಅಲ್ಲಿಯೇ ಬಿದ್ದಿದ್ದ ಮು ಮಾ 1 ಮತ್ತು 2 ನ್ನು ನಾನು ತೋರಿಸಿದ ಮೇರೆಗೆ ತನಿಖಾಧಿಕಾರಿಗಳು ಅದನ್ನು ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಅದೇ ಕಾಲಕ್ಕೆ ತನಿಖಾಧಿಕಾರಿಗಳು ನಿಪಿ 4 ಕಚ್ಚಾ ನಕಾಶೆಯನ್ನು ತಯಾರಿಸಿದ್ದರು ಎಂದರೆ ಸರಿಯಲ್ಲ ಹಾಗೂ ಸ್ಥಳದಲ್ಲಿಯೇ ನಿಪಿ 3 ಮತ್ತು 4 ಕ್ಕೆ ನನ್ನ ಸಹಿಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ. ನಿಪಿ 3 ಪಂಚನಾಮೆ ಕಾಲಕ್ಕೆ ನಿಪಿ 5 ಮತ್ತು 6 ರಂತೆ ಛಾಯಾಚಿತ್ರ ತೆಗೆಯಲಾಗಿತ್ತು ಎಂದರೆ ಸರಿಯಲ್ಲ.

12. ನನ್ನ ಅಳಿಯನಾದ ಆರೋಪಿ ಬೇರೆ ಮದುವೆ ಆಗಿರುವುದಿಲ್ಲ. ನಾವೆಲ್ಲರೂ ಈಗ ಒಳ್ಳೆಯ ರೀತಿಯಿಂದ ಇದ್ದೇವೆ. ನನ್ನ ಸಮಕ್ಷಮ ತನಿಖಾಧಿಕಾರಿ ಪಂಚನಾಮೆ ಮಾಡಿದ್ದರೂ,

ಮು ಮಾ 1 ಮತ್ತು 2 ನ್ನು ಜಪ್ತು ಪಡಿಸಿಕೊಂಡಿದ್ದರೂ ಹಾಗೂ ನಿಪಿ 15 ಮತ್ತು 16 ರಂತೆ ನಾನು ಹೇಳಿಕೆ ಮತ್ತು ಮರುಹೇಳಿಕೆಗಳನ್ನು ನೀಡಿದ್ದರೂ ಸಹಾ ಆರೋಪಿಗೆ ತೊಂದರೆ ಆಗಬಾರದು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ. ಜಿ. ಎನ್. ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

Sd/-
(ಪರಮೇಶ್ವರ ಪ್ರಸನ್ನ ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ